ದಿನಾಂಕ 16-04-2024 ರಂದು ಸಾಕ್ಷಿಯನ್ನು ಮರಳಿ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

<u>ಪಾಟೀಸವಾಲುಃ ಅರ್ಜಿದಾರರ ಪರ ಶ್ರೀ ಡಿ.ಬಿ. ಎಸ್ ವಕೀಲರಿಂದ</u>

1) 2 ನೇ ಪಕ್ಷಗಾರ ಸಂಸ್ಥೆ ನನ್ನ ಒಡೆತನಕ್ಕೆ ಸಂಬಂಧಪಟ್ಟಿರುತ್ತದೆ. ನನಗೆ ಈ ಪ್ರಕರಣದಲ್ಲಿನ ಅರ್ಜಿದಾರರ ಪರಿಚಯ ಇರುತ್ತದೆ. 1 ರಿಂದ 8 ನೇ ಅರ್ಜಿದಾರರು ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು. ದಿಃ 09-07-2019 ರಂದು 2 ನೇ ಪಕ್ಷಗಾರ ಸಂಸ್ಥೆಯನ್ನು ನಾನು ಮುಚ್ಚಿರುತ್ತೇನೆ. 2 ನೇ ಪಕ್ಷಗಾರ ಸಂಸ್ಥೆಯನ್ನು ಮುಚ್ಚುವ ಮೊದಲು ಯಾವುದೇ ಕಾರ್ಮಿಕರಿಗೆ ಆ ಕುರಿತು ಲಿಖಿತವಾಗಿ ನೋಟಿಸು ಕೊಟ್ಟಿರುವುದಿಲ್ಲ. 1999 ರಲ್ಲಿ ಮೊದಲು ನನ್ನ ಗಂಡ 2 ನೇ ಪಕ್ಷಗಾರ ಸಂಸ್ಥೆಯನ್ನು ಆರಂಭಿಸಿ ನಡೆಸಿಕೊಂಡು ಬರುತ್ತಿದ್ದು, ನಾನು 2016 ರಿಂದ ಮುಚ್ಚುವವರೆಗೆ ನಡೆಸಿಕೊಂಡು ಬಂದಿದ್ದೆನು.

2) 2 ನೇ ಪಕ್ಷಗಾರ ಸಂಸ್ಥೆಯಲ್ಲಿ ಸಂಬಳ ಪಾವತಿಸಿದ ಬಗ್ಗೆ ದಾಖಲೆ ಇರುತ್ತದೆ. 2 ನೇ ಎದುರುದಾರ ಸಂಸ್ಥೆಯಲ್ಲಿ ಕಾರ್ಮಿಕರ ಹಾಜರಿ ಪುಸ್ತಕ ಇರುವುದಿಲ್ಲ. ಕಾರ್ಮಿಕರ ಹಾಜರಾತಿಯ ಬಗ್ಗೆ ಸಂಸ್ಥೆಯ ಮ್ಯಾನೇಜರ್ ನೋಡಿಕೊಳ್ಳುತ್ತಿದ್ದು ಆ ಬಗ್ಗೆ ದಾಖಲೆ ಅವರ ಬಳಿ ಇರುತ್ತದೆ. 2 ನೇ ಪಕ್ಷಗಾರ ಸಂಸ್ಥೆಯ ಕಾರ್ಮಿಕರಿಗೆ ಇ .ಎಸ್ ಐ ಸೌಲಭ್ಯ ಕೊಟ್ಟಿರುವುದಿಲ್ಲ. 09-07-2019 ರಂದು 2 ನೇ ಪಕ್ಷಗಾರ ಸಂಸ್ಥೆಯನ್ನು ಮುಚ್ಚುವ ಸಮಯದಲ್ಲಿ ಸುಮಾರು 30 ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಯಾವುದೇ ಸಂಸ್ಥೆಯಲ್ಲಿ 5 ಕ್ಕಿಂತ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದಲ್ಲಿ ಅವರಿಗೆ ಇ ಎಸ್ ಐ ಸೌಲಭ್ಯ ಕಡ್ಡಾಯವಾಗಿ ಕೊಡಬೇಕು ಎನ್ನುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಕಾರ್ಮಿಕರಿಗೆ ಭವಿಷ್ಯ ನಿಧಿ ಸೌಲಭ್ಯ ಸಹ ಇರುತ್ತದೆ. ನಮ್ಮ ಸಂಸ್ಥೆಯ ಕಾರ್ಮಿಕರಿಗೆ ಭವಿಷ್ಯ ನಿಧಿ ಸೌಲಭ್ಯವನ್ನು ನೀಡಿತ್ತು. ಸಂಸ್ಥೆಯು ಮುಚ್ಚುವವರೆಗೆ ಕಾರ್ಮಿಕರಿಗೆ ಭವಿಷ್ಯ ನಿಧಿಯಲ್ಲಿನ ಸಂಸ್ಥೆಯ ಪಾಲನ್ನು ಪಾವತಿಸಿದ ಬಗ್ಗೆ ನಮ್ಮಲ್ಲಿ ದಾಖಲೆ ಇರುತ್ತದೆ. ಭವಿಷ್ಯ ನಿಧಿ ಪಾವತಿಯ ಮತ್ತು ಸಂಬಳ ಪಾವತಿಸಿದ ದಾಖಲೆಗಳನ್ನು ಹಾಜರುಪಡಿಸಿದಲ್ಲಿ 2 ನೇ ಪಕ್ಷಗಾರ ಸಂಸ್ಥೆಯಲ್ಲಿ ಒಟ್ಟು ಎಷ್ಟು ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದರು ಎಂದು ಗೊತ್ತಾಗುತ್ತದೆ. ಸದರಿ ದಾಖಲೆಗಳನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

3) 2 ನೇ ಪಕ್ಷಗಾರ ಸಂಸ್ಥೆಯನ್ನು ಮುಚ್ಚುವ ಮೊದಲು ಕಾರ್ಮಿಕ ಇಲಾಖೆಗೆ ಸದರಿ ವಿಷಯ ತಿಳಿಸಿರುವುದಿಲ್ಲ. ಸಂಸ್ಥೆಯ ಕಾರ್ಮಿಕರಿಗೂ ಸಹ ಸದರಿ ವಿಷಯ ತಿಳಿಸಿರುವುದಿಲ್ಲ. 2 ನೇ ಪಕ್ಷಗಾರ ಸಂಸ್ಥೆಯಲ್ಲಿ ದಿಃ 08-07-2019 ರವರೆಗೆ ಕಾರ್ಮಿಕರು ಕೆಲಸ ಮಾಡಿರುತ್ತಾರೆ ಎನ್ನುವುದು ಸರಿಯಲ್ಲ. 2 ನೇ ಪಕ್ಷಗಾರ ಸಂಸ್ಥೆಯಲ್ಲಿ ಯಾವ ಕಾರ್ಮಿಕರು ಎಲ್ಲಿಯವರಗೆ ಕೆಲಸ ಮಾಡಿರುತ್ತಾರೆಂದು ನನಗೆ ಹೇಳಲು ಬರುವುದಿಲ್ಲ. ಕಾರ್ಮಿಕರು ಯಾವ ದಿನಾಂಕದವರೆಗೆ 2 ನೇ ಪಕ್ಷಗಾರ ಸಂಸ್ಥೆಯಲ್ಲಿ ಕೆಲಸ ಮಾಡಿದ ಬಗ್ಗೆ ದಾಖಲೆಗಳು ಇರುತ್ತವೆ. 09-07-2019 ರಂದು 2 ನೇ ಪಕ್ಷಗಾರ ಸಂಸ್ಥೆಯನ್ನು ಸಂಪೂರ್ಣವಾಗಿ ಮುಚ್ಚುವ ಸಮಯದಲ್ಲಿ ಕಾರ್ಮಿಕರಿಗೆ ಶಾಸನ ಬದ್ದವಾಗಿ ಸಿಗಬೇಕಾದ ಗ್ರಾಚ್ಯುಟಿ, ಭವಿಷ್ಯ ನಿಧಿ ಮತ್ತು ಇತರೇ ಸೌಲಭ್ಯಗಳನ್ನು ಪಾವತಿಸಿದ್ದು ಇರುವುದಿಲ್ಲ.

4) ಈ ಅರ್ಜಿಗೆ ತಕಾರಾರು ಸಲ್ಲಿಸಲು ಮತ್ತು ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಸದರಿ ಸಮಯದಲ್ಲಿ ನನ್ನ ವಕೀಲರಿಗೆ ಯಾವ ಯಾವ ದಾಖಲೆಗಳನ್ನು ಪೂರೈಕೆ ಮಾಡಿದ್ದೇನೆ ಎಂದು ಹೇಳಲು ಬರುವುದಿಲ್ಲ. ತಕರಾರು ಮತ್ತು ಮುಖ್ಯವಿಚಾರಣೆ ತಯಾರಿಸಲು ನನ್ನ ವಕೀಲರಿಗೆ ಯಾವ ದಾಖಲೆಯ ಆಧಾರದಿಂದ ಮಾಹಿತಿ ಕೊಟ್ಟಿದ್ದೇನೆ ಎಂದು ಹೇಳಲು ಬರುವುದಿಲ್ಲ. ತಕರಾರು ಕರಡು ತಯಾರಿಸುವ ಸಮಯದಲ್ಲಿ ಈ ಪ್ರಕರಣದ ಅರ್ಜಿದಾರರು 2 ನೇ ಪಕ್ಷಗಾರ ಸಂಸ್ಥೆಯಲ್ಲಿ ದಿನಗೂಲಿ ಕಾರ್ಮಿಕರು ಎಂದು ಮಾಹಿತಿ ಕೊಟ್ಟಿರುತ್ತೇನೆ. ಅರ್ಜಿದಾರರನ್ನು ದಿನಗೂಲಿ ಕಾರ್ಮಿಕರು ಎಂದು ಈ ಪ್ರಕರಣಕ್ಕಾಗಿ ಮಾಹಿತಿ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಅರ್ಜಿದಾರರು ದಿನಗೂಲಿ ಕಾರ್ಮಿಕರು ಎಂದು ತೋರಿಸುವ ಯಾವುದೇ ದಾಖಲೆ 2 ನೇ ಪಕ್ಷಗಾರ ಸಂಸ್ಥೆಯಲ್ಲಿ ಇರುವುದಿಲ್ಲ.

5) ಈ ಪ್ರಕರಣದಲ್ಲಿ ಅರ್ಜಿದಾರರು ಹಾಜರುಪಡಿಸಿರುವ ದಾಖಲೆಗಳನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಅರ್ಜಿದಾರರು ಹಾಜರುಪಡಿಸಿರುವ ದಾಖಲೆಗಳ ಪ್ರಕಾರ ಅವರು 2 ನೇ ಪಕ್ಷಗಾರ ಸಂಸ್ಥೆಯ ಖಾಯಂ ನೌಕರರು ಎಂದು ಕಂಡಬರುತ್ತದೆ ಎನ್ನುವುದು ಸರಿಯಲ್ಲ. ನಿಶಾನೆ ಆರ್-1 ರಿಂದ 5 ದಾಖಲಗೆಳನ್ನು ಸ್ವೀಕರಿಸಿದ ಬಗ್ಗೆ ನಮ್ಮ ಸಂಸ್ಥೆಯ ದಾಖಲೆಗಳಲ್ಲಿ ಉಲ್ಲೇಖ ಇರುತ್ತದೆ. ಸದರಿ ವಿಷಯ ಉಲ್ಲೇಖ ಇರುವ ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಬಹುದಾಗಿದೆ. ನಿ.ಅರ್ -1 ರಿಂದ 5 ದಾಖಲೆಗಳನ್ನು ಈ ಪ್ರಕರಣಕ್ಕೆ ಸೃಷ್ಟಿ ಮಾಡಿದ್ದೇವೆ ಎನ್ನುವುದು ಸರಿಯಲ್ಲ. 2 ನೇ ಪಕ್ಷಗಾರ ಸಂಸ್ಥೆಯನ್ನು ಸಂಪೂರ್ಣವಾಗಿ ಮುಚ್ಚುವ

ಮೊದಲು ಕಾರ್ಮಿಕರಿಗೆ ತಲಾ 3 ತಿಂಗಳ ಸಂಬಳವನ್ನು ಪಾವತಿಸಬೇಕಾಗಿತ್ತು ಎನ್ನುವುದು ಸರಿಯಲ್ಲ. ಏಕೆಂದರೆ ಅರ್ಜಿದಾರರು ಸಂಸ್ಥೆಯ ಖಾಯಂ ನೌಕರರು ಇರುವುದಿಲ್ಲ.

6) ದಿಃ 09-07-2019 ರಂದು ನಮ್ಮ ಸಂಸ್ಥೆಯಲ್ಲಿ ಯಾವುದೇ ಖಾಯಂ ಕಾರ್ಮಿಕರು ಕೆಲಸ ಮಾಡುತ್ತಿರಲಿಲ್ಲ. 2 ನೇ ಪಕ್ಷಗಾರ ಸಂಸ್ಥೆಯಲ್ಲಿ ಯಾವುದೇ ಸಮಯದಲ್ಲೂ ಖಾಯಂ ನೌಕರರು ಇರಲಿಲ್ಲ. ಕೆಲಸ ಇದ್ದಾಗ ಮಾತ್ರ ಕಾರ್ಮಿಕರನ್ನು ಕರೆಯಿಸಿ ದಿನಗೂಲಿ ಆಧಾರದ ಮೇಲೆ ಕೆಲಸ ಮಾಡಿಸುತ್ತಿದ್ದೆವು. ವೇಜ್ ರಿಜಿಸ್ಟರ್ ಅನ್ನು ಖಾಯಂ ನೌಕರರಿಗೆ ಸಂಬಳ ಪಾವತಿಸಿದ ಬಗ್ಗೆ ನಿರ್ವಹಿಸುತ್ತದೆ. ಈ ಪ್ರಕರಣದ ಅರ್ಜಿದಾರರು 2 ನೇ ಪಕ್ಷಗಾರ ಸಂಸ್ಥೆಯಲ್ಲಿ ಖಾಯಂ ನೌಕರರಾಗಿ ಕೆಲಸ ಮಾಡುತ್ತಿದ್ದರು ಎನ್ನುವುದು ಸರಿಯಲ್ಲ. ಅರ್ಜಿದಾರರು ಅರ್ಜಿಯಲ್ಲಿ ಕೇಳಿರುವ ಗ್ರಾಚ್ಯುಟಿ, ಭವಿಷ್ಯ ನಿಧಿ, 3 ತಿಂಗಳ ಸಂಬಳ ಮತ್ತು ಇತರೇ ಶಾಸನ ಬದ್ಧ ಸೌಲಭ್ಯಗಳನ್ನು ಪಡೆಯುವ ಅರ್ಹತೆಯನ್ನು ಹೊಂದಿದ್ದಾರೆ ಎನ್ನುವುದು ಸರಿಯಲ್ಲ. ಅರ್ಜಿದಾರರು 2 ನೇ ಪಕ್ಷಗಾರ ಸಂಸ್ಥೆಯಲ್ಲಿ ಎಲ್ಲಾ ಶಾಸನ ಬದ್ಧ ಸೌಲತ್ತುಗಳನ್ನು ಕೊಡುವಂತೆ ಕೇಳಿದರೂ ಸಹ ನಾವು ಕೊಡಲಿಲ್ಲ ಎನ್ನುವುದು ಸರಿಯಲ್ಲ. ಅರ್ಜಿದಾರರು ನಮ್ಮ ಸಂಸ್ಥೆಯಲ್ಲಿ ಖಾಯಂ ಕಾರ್ಮಿಕರು ಎಂದು ಕೆಲಸ ಮಾಡುತ್ತಿದ್ದ ಬಗ್ಗೆ ಗೊತ್ತಾಗುತ್ತದೆ ಎಂದು ಉದ್ದೇಶ ಪೂರ್ವಕವಾಗಿ ವೇಜ್ ರಿಜಿಸ್ಟರ್ ಮತ್ತು ಭವಿಷ್ಯ ನಿಧಿ ಹಾಗೂ ಇ.ಎಸ್ ಐ ದಾಖಲೆಗಳನ್ನು ಹಾಜರು ಮಾಡಿಲ್ಲ ಎನ್ನುವುದು ಸರಿಯಲ್ಲ. ಅರ್ಜಿದಾರರಿಗೆ ಶಾಸನ ಬದ್ಧವಾಗಿ ಸವಲತ್ತುಗಳನ್ನು ಪಾವತಿಸುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲೆಂದು ನಾನು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

-ಮರುವಿಚಾರಣೆ ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಶಾಂತವೀರ ಶಿವಪ್ಪ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಉಡುಪಿ